ಶ್ರೀ ಎನ್. ಹುಚ್ಚಮಾಸ್ತಿಗೌಡ: ಸರ್ಕಾರಕ್ಕೆ ಗೊತ್ತಿರುವ ಹಾಗೆ ಈ ವ್ಯವಹಾರ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದಕ್ಕೆ ಆಗಿಲ್ಲ. ನನಗೆ ತಿಳಿದ ಮಟ್ಟಿಗೆ ಈ ತರಹ ವ್ಯವಹಾರ ನಡೆಯಲಾರದೆಂಬ ಭರವಸೆ ಇದೆ. ಅಂಥದ್ದು ಏನಾದರೂ ಇದ್ದರೆ ಅದನ್ನು ವಿಚಾರಣೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್.ಎನ್. ನಾಯಕ್: ಈ ಕರ್ನಾಟಕ ರಾಜ್ಯದಲ್ಲಿ ಈ ಸಹಕಾರ ಮಾರಾಟ ಮಹಾಮಂಡಲದಿಂದ ಗೊಬ್ಬರ ವಿತರಣೆ ಮಾಡುವುದರಲ್ಲಿ ತಪ್ಪಾಗಿದೆ ಎಂದು ತಮಗೆ ಸಾರ್ವಜನಿಕರಿಂದ ಎಷ್ಟು ದೂರುಗಳು ಇಲ್ಲಿಯವರೆಗೆ ಬಂದಿದ್ದವು? ಆ ತರಹ ಬಂದಿದ್ದರೆ ತಾವು ಆ ದೂರುಗಳ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರೋ ಹೇಗೆ? ಅಥವಾ ನಿಮ್ಮ ಅಧಿಕಾರಿಗಳಿಗೆ ದೂರು ಏನಾದರೂ ಬಂದಿತ್ತೋ? ಬಂದಿದ್ದರೆ ಅದರ ಮೇಲೆ ಅವರು ಏನು ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ: ದೂರುಗಳು ನನಗೆ ಸಾಮಾನ್ಯವಾಗಿ ಬರಬಹುದು. ಆದರೆ ಈ ಸಂದರ್ಭದಲ್ಲಿ ಅದರಲ್ಲಿ ಎಷ್ಟರಮಟ್ಟಿಗೆ ಸತ್ಯಾಂಶ ಇದೆ ಎಂಬುದು ಸ್ಪಷ್ಟವಾಗಿ ಗೊತ್ತಾಗಿಲ್ಲ. ಇದನ್ನು ವಿಚಾರಣೆ ಮಾಡಿ ಅದರಲ್ಲಿ ಸತ್ಯಾಂಶ ಇರುವ ಹಾಗೆ ಕಂಡುಬಂದರೆ ಮುಂದಿನ ಕ್ರಮವನ್ನು ಖಂಡಿತವಾಗಿ ನಾವು ತೆಗೆದುಕೊಳ್ಳುತ್ತೇವೆ. ಇಂಥ ವ್ಯವಹಾರಗಳು ಪಡೆಯದಿರುವ ಹಾಗೆ ಸರ್ವಪ್ರಯತ್ನವನ್ನೂ ನಾನು ಮಾಡುತ್ತೇನೆ.

ಶ್ರೀ ಆರ್.ಎನ್. ನಾಯಕ್: ಈಗ ತಮ್ಮ ಉತ್ತರದಿಂದ ತಮಗೆ ದೂರುಗಳು ಬಂದಿದೆಯೋ ಹೇಗೆ ಎಂಬ ಪರಿಚಯ ಇದ್ದ ಹಾಗೆ ಇಲ್ಲ. ದಯಮಾಡಿ ನೆನೆಪು ಮಾಡಿಕೊಳ್ಳಿ, ತಮಗೇನಾದರೂ ಗೊಬ್ಬರ ಅವ್ಯವಹಾರ ಬಗ್ಗೆ ದೂರುಗಳು ಬಂದಿದ್ದಾವೋ ಹೇಗೆ? ನಿಮಗೆ ಅಥವಾ ನಿಮ್ಮ ಅಧಿಕಾರಿಗಳಿಗೆ ದೂರುಗಳು ಬಂದಿದೆಯೋ ಹೇಗೆ? ದೂರುಗಳು ಬಂದಿದ್ದರೆ ಆ ದೂರುಗಳ ಬಗ್ಗೆ ಈ ತನಕ ಏನಾದರೂ ವಿಚಾರಣೆ ಮಾಡಿದ್ದಾರೋ ಹೇಗೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ: ಆಗಲೇ ನಾನು ಹೇಳಿದೆ. ದೂರುಗಳು ಬಂದರೆ ಕೂಡಲೇ ಅದನ್ನು ವಿಚಾರಣೆ ಮಾಡಿ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ಆ ವಿಷಯಾಡೆಲ್ಲಾ ಇವತ್ತಿರತಕ್ಕ ಕ್ರಮದಲ್ಲಿದೆ. ಅದಷ್ಟೇ ಅಲ್ಲದೆ, ಕೂಡಲೇ ಅವ್ಯವಹಾರ ಮಾಡತಕ್ಕವರಿಂದ ಈ ವ್ಯವಹಾರವನ್ನು ಕೈತಪ್ಪಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ಕೂಡ ಇದೆ. ಆದ್ದರಿಂದ ಮಾನ್ಯ ಸದಸ್ಯರು ಈ ವಿಷಯದಲ್ಲಿ ಅನುಮಾನ ಪಡಬೇಕಾಗಿಲ್ಲ. ಅಂಥದ್ದೇನಾದರೂ ಇದ್ದರೆ ನನಗೆ ತಿಳಿಸಿ. ಆದಷ್ಟು ಬೇಗ ಮುಂದಿನ ಕ್ರಮ ತೆಗೆದುಕೊಂಡು ಸಮಾಧಾನಕರವಾದ ಉತ್ತರ ಕೊಡುತ್ತೇನೆ.

ಅಧ್ಯಕ್ಷರು: ಮಾನ್ಯ ಲಕ್ಷ್ಮಣ್ಣನವರೇ, ತಮ್ಮ ಪ್ರಶ್ನೆಯನ್ನು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ವರ್ಗಾಯಿಸಿದೆ. ಅದನ್ನು ಮುಂದೆ ತೆಗೆದುಕೊಳ್ಳುತ್ತೇನೆ.

ಕುಡಿಯುವ ನೀರು ಹಾಗೂ ಗ್ರಾಮ ನೈರ್ಮಲ್ಯ ಯೋಜನೆ

554 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವಬ್ಯಾಂಕ್ಷ ನೆರವಿನಿಂದ ರಾಜ್ಯದಲ್ಲಿ ಕುಡಿಯುವ ನೀರಿನ ಹಾಗೂ ಗ್ರಾಮ ನೈರ್ಮಲ್ಯದ ಬಗ್ಗೆ ಯೋಜನೆಯನ್ನು ಏನಾದರೂ ಕೈಗೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ, ಯಾವ ಜಿಲ್ಲೆಗಳಲ್ಲಿ ಈ ಯೋಜನೆ ಅನುಷ್ಠಾನಕ್ಕೆ ಬರುತ್ತದೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಹೌದು

ಆ)
1) ಬೆಂಗಳೂರು (ಗ್ರಾಮಾಂತರ)
2) ಶಿವಮೊಗ್ಗ
3) ಮೈಸೂರು
4) ಮಂಡ್ಯ
5) ದಕ್ಷಿಣ ಕನ್ನಡ
6) ಬೆಳಗಾಂ
7) ಗುಲ್ಬರ್ಗಾ
8) ಬೀದರ್
9) ರಾಯಚೂರು
10) ಬಳ್ಳಾರಿ
11) ತುಮಕೂರು, ಹಾಗೂ
12) ಹಾಸನ.

ಶ್ರೀ ಎಂ. ತಮ್ಮಣ್ಣ (ಶ್ರೀ ಎಂ.ಎಸ್. ಆತ್ಮಾನಂದ ಅವರ ಪರವಾಗಿ): ಸನ್ಮಾನ್ಯ ಸಭಾಧ್ಯಕ್ಷರೆ, ವಿಶ್ವಬ್ಯಾಂಕಿನ ನೆರವಿನಿಂದ ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆ ತೆಗೆದುಕೊಂಡಿದ್ದು ಅದರಲ್ಲಿ ಮಂಡ್ಯ ಜಿಲ್ಲೆಯೂ ಒಂದಾಗಿದೆ. ಈ ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳನ್ನು ಇದಕ್ಕೆ ಆಳವಡಿಸಿದ್ದಾರೆ? ಇಲ್ಲಿಯವರೆಗೆ ಎಷ್ಟು ಕಾರ್ಯಕ್ರಮಗಳು ಪ್ರಾರಂಭವಾಗಿವೆ ಎಂಬುದನ್ನು ಕೇಳಲು ಇಚ್ಛಿಸುತ್ತೇನೆ.

ಅಧ್ಯಕ್ಷರು: ಪ್ರಶ್ನೆಯನ್ನು ಇನ್ನೊಮ್ಮೆ ಕೇಳಿ. ಅವರಿಗೆ ಸರಿಯಾಗಿ ಕೇಳಲಿಲ್ಲ.

ಶ್ರೀ ಎಂ. ತಮ್ಮಣ್ಣ: ಸನ್ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಒಟ್ಟು 12 ಜಿಲ್ಲೆಗಳು ವಿಶ್ವಬ್ಯಾಂಕಿನ ಯೋಜನೆಗೆ ಒಳಪಟ್ಟಿವೆ. ಅದರಲ್ಲಿ ನಮ್ಮ ಮಂಡ್ಯ ಜಿಲ್ಲೆಯೂ ಒಂದು. ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳನ್ನು ಈ ಯೋಜನೆಗೆ ಆಳವಡಿಸಿದ್ದಾರೆ? ಇಲ್ಲಿಯವರೆಗೆ ಎಷ್ಟು ಕಾರ್ಯಕ್ರಮಗಳನ್ನು ಪ್ರಾರಂಭಿಸಿದ್ದೀರಿ?

ಶ್ರೀ ಎಂ.ವೈ. ಘೋರ್ಪಡೆ: ಜಿಲ್ಲಾವಾರು ಮಾಹಿತಿ ನನ್ನ ಕಡೆ ಇಲ್ಲ. ವರ್ಲ್ಡ್ ಬ್ಯಾಂಕ್ ಯೋಜನೆಯಡಿಯಲ್ಲಿ ಎಷ್ಟು ಸೇರಿಸಿದ್ದೇವೆ ಆ ಮಾಹಿತಿ ಕೊಟ್ಟಿದ್ದೇನೆ. ಆದರೆ ಯಾವ ಯಾವ ಹಳ್ಳಿಗಳು ಅನ್ವಯಿಸುತ್ತವೆ ಎಂಬುದು ತಮಗೇ ಗೊತ್ತಿರಬೇಕು. ಈ ತಕ್ಷಣ ಆ ಮಾಹಿತಿ ನನ್ನ ಕಡೆ ಇಲ್ಲ. ಬೇಕಾದರೆ ಕಳುಹಿಸಿಕೊಡುತ್ತೇನೆ. ಯಾವ ಯಾವ ಹಳ್ಳಿ ಸೇರಿದೆ, ಯಾವ ಯಾವ ಕೆಲಸ ಪ್ರಾರಂಭವಾಗುತ್ತದೆ, ಎಷ್ಟು ಖರ್ಚಾಗುತ್ತದೆ ಈ ವಿವರಗಳು ನಮ್ಮ ಕಡೆ ಇದೆ. ಸದ್ಯಕ್ಕೆ ಇಲ್ಲಿ ನಮ್ಮ ಕಡೆ ಇಲ್ಲ. ತಮಗೆ ನಾನು ಕಳುಹಿಸಿಕೊಡುತ್ತೇನೆ.

ಶ್ರೀ ಎಂ. ತಮ್ಮಣ್ಣ: ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಹಳ್ಳಿಗಳನ್ನು ವಿಶ್ವ ಬ್ಯಾಂಕಿನ ಯೋಜನೆಗೆ ಆಳವಡಿಸಿದ್ದಾರೆ? ಈಗಾಗಲೇ ಎಷ್ಟು ಕಾರ್ಯಕ್ರಮ ಪ್ರಾರಂಭಿಸಿದ್ದೀರಿ?

ಶ್ರೀ ಎಂ.ವೈ. ಘೋರ್ಪಡೆ: ಡೀಟೈಲ್ಸ್ ಇದ್ದರೆ ಕಳುಹಿಸಿಕೊಡುತ್ತೇನೆ. ಯಾವ ಯಾವ ಹಳ್ಳಿ ಸೇರಿವೆ, ಎಷ್ಟೆಷ್ಟು ಖರ್ಚಾಗುತ್ತದೆ ಎಂಬ ವಿವರಗಳನ್ನು ಕಳುಹಿಸಿಕೊಡುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬೆಲ್ಲದ ಬಾಗೇವಾಡಿ ಗ್ರಾಮದಲ್ಲಿ ಕುಡಿಯುವ ನೀರಿನ ಯೋಜನೆ

477 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?